ಕರ್ನಾಟಕ ಸರ್ಕಾರ

ನಿರ್ದೇಶಕರ ಕಛೇರಿ, ಪದವಿ ಪೂರ್ವ ಶಿಕ್ಷಣ ಇಲಾಖೆ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು-560012

---

ಸಂಖ್ಯೆ: ಪಪೂಶಿಇ/ಶೈ.ಶಾ/ಪ್ರ ಮೌ ದಾ/2020-21 ದಿನಾಂಕ:೦೮ /06/2021

## ಸುತ್ತೋಲೆ

**ವಿಷಯ: 2020-21ನೇ ಸಾಲಿನ ಪ್ರಥಮ ಪಿಯುಸಿ ವಿದ್ಯಾರ್ಥಿಗಳ ಮೌಲ್ಯಾಂಕನವನ್ನು ಎಸ್.ಎ.ಟಿ.ಎಸ್.ನಲ್ಲಿ ದಾಖಲಿಸುವ ಬಗ್ಗೆ.**

**ಉಲ್ಲೇಖ: ಕಛೇರಿ ಸುತ್ತೋಲೆ ಸಂಖ್ಯೆ:ಪಪೂಶಿಇ/ಪರೀಕ್ಷೆ/ದ್ವಿಪ್ರಾಪ/2020-21 ದಿನಾಂಕ:04-05-2021**

****

2020-21ನೇ ಸಾಲಿನ ಪ್ರಥಮ ಪಿಯುಸಿ ವಿದ್ಯಾರ್ಥಿಗಳನ್ನು ಕೋವಿಡ್-19ರ ತೀವ್ರ ಏರಿಕೆ ಕಾರಣದಿಂದ ಹಾಗೂ ವಿದ್ಯಾರ್ಥಿಗಳ ಆರೋಗ್ಯದ ಹಿತದೃಷ್ಟಿಯಿಂದ ವಾರ್ಷಿಕ ಪರೀಕ್ಷೆಯನ್ನು ರದ್ದುಪಡಿಸಿ, ದಾಖಲಾದ ಎಲ್ಲಾ ವಿದ್ಯಾರ್ಥಿಗಳನ್ನು ತೇರ್ಗಡೆಯಾಗಿದ್ದಾರೆಂದು ಪರಿಗಣಿಸಲು ಸುತ್ತೋಲೆಯಲ್ಲಿ ಈಗಾಗಲೇ ತಿಳಿಸಲಾಗಿದೆ.

ಅಲ್ಲದೇ ಪ್ರಸಕ್ತ ವರ್ಷದ ವಿದ್ಯಾರ್ಥಿಗಳು ಮುಂದಿನ ಶೈಕ್ಷಣಿಕ ಸಾಲಿನಲ್ಲಿ ದ್ವಿತೀಯ ಪಿಯುಸಿಗೆ ದಾಖಲಾತಿ ಪಡೆಯಲು ಹಾಗೂ ಆ ಅವಧಿಯಲ್ಲಿ ಅವರಿಗೆ ದೊರಕಬೇಕಾದ ವಿದ್ಯಾರ್ಥಿ ವೇತನದಂತಹ ಸೌಲಭ್ಯವನ್ನು ಪಡೆಯಲು ವಿದ್ಯಾರ್ಥಿಗಳ ಫಲಿತಾಂಶವನ್ನು ಎಸ್.ಎ.ಟಿ.ಎಸ್. ತಂತ್ರಾಂಶದಲ್ಲಿ ಅಂಕಗಳ ರೂಪದಲ್ಲಿ ದಾಖಲೀಕರಿಸುವುದು ಅಗತ್ಯವಾಗಿರುತ್ತದೆ.

ಈ ಸಂಬಂಧ ಇಲಾಖೆಯು ವಿದ್ಯಾರ್ಥಿಗಳು ತಮ್ಮ ದೀರ್ಘಕಲಿಕಾ ಪ್ರಕ್ರಿಯೆಯಲ್ಲಿ ನಿರಂತರತೆಯನ್ನು ಕಾಯ್ದುಕೊಳ್ಳಲು ಹಾಗೂ ಶೈಕ್ಷಣಿಕ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವಂತೆ ಮಾಡುವ ಉದ್ದೇಶದಿಂದ ಅಸೈನ್‌ಮೆಂಟ್‌ಗಳನ್ನು ಪೂರ್ಣಗೊಳಿಸಿ ನೀಡುವಂತೆ ಕ್ರಮ ಕೈಗೊಳ್ಳಬಹುದಾಗಿದೆ ಎಂದು ಜಿಲ್ಲಾ ಉಪನಿರ್ದೇಶಕರ ಸಭೆಯಲ್ಲಿ ಚರ್ಚಿಸಲಾಯಿತು. ವಿದ್ಯಾರ್ಥಿಗಳು ಸಿದ್ದಪಡಿಸಿ ಉಪನ್ಯಾಸಕರಿಗೆ ಸಲ್ಲಿಸಿದ ಅಸೈನ್‌ಮೆಂಟ್‌ಗಳನ್ನು ಮೌಲ್ಯಮಾಪನ ಮಾಡಿ ಎಸ್.ಎ.ಟಿ.ಎಸ್.ನಲ್ಲಿ ಅಳವಡಿಸಲು ತೀರ್ಮಾನಿಸಿದೆ. ಈ ಪ್ರಕ್ರಿಯೆ ಎಲ್ಲಾ ಪ್ರಥಮ ಪಿ.ಯು.ಸಿ ವಿದ್ಯಾರ್ಥಿಗಳಿಗೆ ಅನ್ವಯವಾಗುವುದು.

**ಪ್ರಥಮ ಪಿ ಯು ಸಿ ವಿದ್ಯಾರ್ಥಿಗಳ ಮೌಲ್ಯಮಾಪನ:**

1. ಎಲ್ಲಾ ಕಾಲೇಜುಗಳ ಪ್ರಾಚಾರ್ಯರು ತಮ್ಮ ಹಂತದಲ್ಲಿ ವಿದ್ಯಾರ್ಥಿಗಳನ್ನು ಕಾಲೇಜಿಗೆ ಭೌತಿಕವಾಗಿ ಬಾರದಂತೆ ಕ್ರಮವಹಿಸಿ, ಇಲಾಖೆಯ ಜಾಲತಾಣದಲ್ಲಿ ನೀಡಿದ ಎರಡು ಪ್ರಶ್ನೆಪತ್ರಿಕೆಗಳಿಗೆ ಹಾಳೆಗಳಲ್ಲಿ ಉತ್ತರಿಸಿ ಸ್ಕ್ಯಾನ್ ಮಾಡಿ ವಾಟ್ಸ್‌ಅಪ್ ಅಥವಾ ಇ ಮೇಲ್‌ನ ಮೂಲಕ, ಅಥವಾ ಬರೆದಿರುವ ಅಸೈನ್‌ಮೆಂಟ್‌ಗಳನ್ನು ಅಂಚೆ ಮೂಲಕ ಅಥವಾ ಇನ್ನಾವುದೇ ರೀತಿಯಲ್ಲಿ ಸಂಬಂಧಿಸಿದ ಉಪನ್ಯಾಸಕರಿಗೆ ಸಲ್ಲಿಸುವಂತೆ

Scanned by CamScanner

ವಿದ್ಯಾರ್ಥಿಗಳಿಗೆ ತಿಳಿಸಿ, ಎರಡೂ ಅಸೈನ್‌ಮೆಂಟ್‌ಗಳನ್ನು ಸಂಬಂಧಿಸಿದ ಉಪನ್ಯಾಸಕರು ಮೌಲ್ಯಮಾಪನ ಮಾಡಿ ಅಂಕಗಳನ್ನು ನೀಡಿ ಎಸ್.ಎ.ಟಿ.ಎಸ್ ತಂತ್ರಾಂಶದಲ್ಲಿ ನಮೂದಿಸಲು ತಿಳಿಸಲಾಗಿದೆ.

2. ಅಸೈನ್‌ಮೆಂಟ್‌ಗಳು ಈಗಾಗಲೇ ಮಾದರಿ ಪ್ರಶ್ನೆ ಪತ್ರಿಕೆ ರೂಪದಲ್ಲಿ ಇಲಾಖಾ ಜಾಲತಾಣದಲ್ಲಿ ಲಭ್ಯವಿದೆ. ವಿದ್ಯಾರ್ಥಿಗಳ ಹೆಸರಿನೊಂದಿಗೆ ನೋಂದಣಿಯಾಗಿರುವ ಮೊಬೈಲ್ ಸಂಖ್ಯೆಗೆ ಇಲಾಖಾ ಜಾಲತಾಣದಲ್ಲಿ ಈಗಾಗಲೇ ಪ್ರಕಟಿಸಿದ ಮಾದರಿ ಪ್ರಶ್ನೆಪತ್ರಿಕೆಗಳ ಲಿಂಕ್ ಸಹ ಕಳುಹಿಸಲಾಗುವುದು. ವಿದ್ಯಾರ್ಥಿಗಳು ಅವರ ವಿಷಯದ ಪ್ರಶ್ನೆಪತ್ರಿಕೆಯ ಲಿಂಕ್ ಕ್ಲಿಕ್ ಮಾಡಿ, ಪ್ರಶ್ನೆಪತ್ರಿಕೆ ಡೌನ್‌ಲೋಡ್ ಮಾಡಿಕೊಂಡು, ಉತ್ತರಿಸಿದ ನಂತರದಲ್ಲಿ ಅವರ ಉಪನ್ಯಾಸಕರಿಗೆ ವಾಟ್ಸ್‌ಅಪ್ ಮೂಲಕ, ಅಥವಾ ಬರೆದಿರುವ ಉತ್ತರ ಪತ್ರಿಕೆಗಳನ್ನು ಇ-ಮೇಲ್/ಅಂಚೆ ಮೂಲಕ ಅಥವಾ ಇನ್ನಾವುದೇ ರೀತಿಯಲ್ಲಿ ಸಂಬಂಧಿಸಿದ ಉಪನ್ಯಾಸಕರಿಗೆ ಸಲ್ಲಿಸಬೇಕು. ಈ ಕುರಿತಾಗಿ ಪ್ರಾಂಶುಪಾಲರು /ಉಪನ್ಯಾಸಕರು ವಿದ್ಯಾರ್ಥಿಗಳಿಗೆ ಮಾಹಿತಿ ತಿಳಿಸುವುದು.

3. ಪ್ರಾಯೋಗಿಕ ವಿಷಯಕ್ಕೆ ಸಂಬಂಧಿಸಿದಂತೆ, ಆಯಾ ವಿಷಯದ ಉಪನ್ಯಾಸಕರುಗಳು, ವಿಷಯಕ್ಕೆ ಸಂಬಂಧಿಸಿದಂತೆ ಈ ಹಿಂದೆ ನಡೆಸಿದ ಪ್ರಾಯೋಗಿಕ ತರಗತಿಗಳ ಆಧಾರದ ಮೇಲೆ ವಸ್ತುನಿಷ್ಠವಾಗಿ ಅಂಕಗಳನ್ನು ನೀಡುವ ಕ್ರಮವಹಿಸಲು ತಿಳಿಸಲಾಗಿದೆ.

**ಮೌಲ್ಯಮಾಪನ ವೇಳಾಪಟ್ಟಿ**

**ಸದರಿ ಅಸೈನ್‌ಮೆಂಟ್‌ಗಳನ್ನು ಈ ಕೆಳಗೆ ನೀಡಿರುವ ದಿನಾಂಕಗಳಂತೆ ನಿರ್ವಹಿಸಲು ಸೂಚಿಸುವುದು.**

| ಸುತ್ತು | ಚಟುವಟಿಕೆಗಳ ವಿವರ | ದಿನಾಂಕ |
|---|---|---|
| ಮೊದಲ ಅಸೈನ್‌ಮೆಂಟ್ | ಈಗಾಗಲೇ ಜಾಲತಾಣದಲ್ಲಿ ಲಭ್ಯವಿದೆ (ಮಾದರಿ ಪ್ರಶ್ನೆ ಪತ್ರಿಕೆ–1) | |
| | ವಿದ್ಯಾರ್ಥಿಗಳು ಉತ್ತರಿಸಿ ಸಂಬಂಧಪಟ್ಟ ಉಪನ್ಯಾಸಕರಿಗೆ ಸಲ್ಲಿಸುವುದು. | 10-06-2021ರಿಂದ 20-06-2021 |
| | ವಿದ್ಯಾರ್ಥಿಗಳು ಸಲ್ಲಿಸಿರುವ ಉತ್ತರಪತ್ರಿಕೆಗಳ ಮೌಲ್ಯಮಾಪನ | 20-06-2021 ರಿಂದ 25-06-2021 |
| ಎರಡನೇ ಅಸೈನ್‌ಮೆಂಟ್ | ಈಗಾಗಲೇ ಜಾಲತಾಣದಲ್ಲಿ ಲಭ್ಯವಿದೆ (ಮಾದರಿ ಪ್ರಶ್ನೆ ಪತ್ರಿಕೆ–2) | |
| | ವಿದ್ಯಾರ್ಥಿಗಳು ಉತ್ತರಿಸಿ ಸಂಬಂಧಪಟ್ಟ ಉಪನ್ಯಾಸಕರಿಗೆ ಸಲ್ಲಿಸುವುದು. | 26-06-2021 ರಿಂದ 05-07-2021 |
| | ವಿದ್ಯಾರ್ಥಿಗಳು ಸಲ್ಲಿಸಿರುವ ಉತ್ತರಪತ್ರಿಕೆಗಳ ಮೌಲ್ಯಮಾಪನ | 06-07-2021 ರಿಂದ 10-07-2021 |
| ಒಟ್ಟು ಮೌಲ್ಯಮಾಪನ | ಎರಡೂ ಅಸೈನ್‌ಮೆಂಟುಗಳನ್ನು ಆಧರಿಸಿ ಅಂಕಗಳನ್ನಾಗಿ ಪರಿವರ್ತಿಸುವುದು | 11-07-2021 ರಿಂದ 15-07-2021 |
| | ಅಂಕಗಳನ್ನು ಎಸ್.ಎ.ಟಿ.ಎಸ್ ಗೆ ದಾಖಲು ಮಾಡುವುದು. | 15-07-2021 ರಿಂದ 20-07-2021 |

Scanned by CamScanner

**ಅಂಕಗಳನ್ನು ನೀಡುವ ಮಾರ್ಗಸೂಚಿ:**

ಮೌಲ್ಯಾಂಕನವನ್ನು ಉಪನ್ಯಾಸಕರು ಕೆಳಕಂಡ ಮಾನದಂಡಗಳನ್ನು ಅನುಸರಿಸಿ ವಿದ್ಯಾರ್ಥಿಯು ಗಳಿಸಿದ ಅಂಕಗಳನ್ನು ಪರಿವರ್ತಿಸಿ ಎಸ್.ಎ.ಟಿ.ಎಸ್ ತಂತ್ರಾಂಶದಲ್ಲಿ ಅಳವಡಿಸುವುದು.

1. **ಪ್ರಯೋಗರಹಿತ ವಿಷಯಗಳಿಗೆ:–**

ಎಲ್ಲಾ ಪ್ರಥಮ ಪಿಯುಸಿ ತರಗತಿಯ ವಿದ್ಯಾರ್ಥಿಗಳಿಗೆ ಪ್ರತಿ ವಿಷಯಗಳಲ್ಲಿ 35 ಅಂಕ ನೀಡುವುದು. ಎರಡು ಪ್ರಶ್ನೆ ಪತ್ರಿಕೆಗಳಿಗೆ ಉತ್ತರ ಬರೆದು ತರಗತಿಯ ಉಪನ್ಯಾಸಕರಿಗೆ ನೀಡಬೇಕು. ಕನಿಷ್ಠ ಒಂದಾದರೂ ಉತ್ತರ ಪತ್ರಿಕೆ ನೀಡಿದರೂ 5 ಅಂಕ ನೀಡಲಾಗುವುದು.

| ಕ್ರ ಸಂ | ಉತ್ತರ ಪತ್ರಿಕೆಯಲ್ಲಿ ಪಡೆದ ಅಂಕಗಳು | ಪರಿವರ್ತಿಸಿದ ಅಂಕಗಳು |
|---|---|---|
| 1 | 36 ರಿಂದ 40 | 5 |
| 2 | 41 ರಿಂದ 50 | 10 |
| 3 | 51 ರಿಂದ 60 | 15 |
| 4 | 61 ರಿಂದ 70 | 20 |
| 5 | 71 ರಿಂದ 80 | 25 |
| 6 | 81 ಕ್ಕಿಂತ ಹೆಚ್ಚು | 30 |

ಎರಡೂ ಉತ್ತರ ಪತ್ರಿಕೆಗಳನ್ನು ಪರಿಶೀಲಿಸಿ ಈ ಆಧಾರದ ಮೇಲೆ ಒಟ್ಟು 30 + 30 = 60 ಅಂಕಗಳನ್ನು ನೀಡುವುದು. ಇನ್ನೂ ಉಳಿದ 5 ಅಂಕಗಳನ್ನು ಉಪನ್ಯಾಸಕರು ಆಂತರಿಕ ಮೌಲ್ಯಮಾಪನವೆಂದು ಅಂಕ ನೀಡುವುದು. ಒಟ್ಟಾರೆ ಅಂಕಗಳು 35+30+30+5=100 ಆಗುವುದು.

2) **ಪ್ರಯೋಗ ಸಹಿತ ವಿಷಯಗಳಿಗೆ**

ಎಲ್ಲಾ ಪ್ರಥಮ ಪಿಯುಸಿ ತರಗತಿಯ ವಿದ್ಯಾರ್ಥಿಗಳಿಗೆ ಪ್ರತಿ ವಿಷಯಗಳಲ್ಲಿ 21 ಅಂಕಗಳು ಮತ್ತು ಪ್ರಾಯೋಗಿಕ ತರಗತಿಗಳಿಗೆ ಸಂಬಂಧಿಸಿದಂತೆ 10 ಅಂಕಗಳು ಹೀಗೆ ಒಟ್ಟು 31 ಅಂಕಗಳು ಲಭ್ಯವಾಗುತ್ತವೆ. ಎರಡು ಅಸೈನ್‌ಮೆಂಟ್‌ಗಳ ಉತ್ತರ ಬರೆದು ತರಗತಿಯ ಉಪನ್ಯಾಸಕರಿಗೆ ನೀಡಬೇಕು. ಕನಿಷ್ಠ ಒಂದಾದರೂ ಉತ್ತರ ಪತ್ರಿಕೆ ನೀಡಿದರೂ 5 ಅಂಕ ನೀಡಲಾಗುವುದು.

| ಕ್ರ ಸಂ | ಉತ್ತರ ಪತ್ರಿಕೆಯಲ್ಲಿ ಪಡೆದ ಅಂಕಗಳು | ಪರಿವರ್ತಿಸಿದ ಅಂಕಗಳು |
|---|---|---|
| 1 | 22 ರಿಂದ 28 | 4 |
| 2 | 29 ರಿಂದ 35 | 8 |
| 3 | 36 ರಿಂದ 42 | 12 |
| 4 | 43 ರಿಂದ 49 | 16 |
| 5 | 50 ರಿಂದ 56 | 19 |
| 6 | 57 ಕ್ಕಿಂತ ಹೆಚ್ಚು | 22 |

Scanned by CamScanner

ವಿಷಯ ಉಪನ್ಯಾಸಕರು ಎರಡೂ ಉತ್ತರ ಪತ್ರಿಕೆಗಳನ್ನು ಪರಿಶೀಲಿಸಿ, ಈ ಆಧಾರದ ಮೇಲೆ ಒಟ್ಟು22+22 =44 ಅಂಕಗಳನ್ನು ನೀಡುವುದು. ಇನ್ನೂ ಉಳಿದ 5 ಅಂಕಗಳನ್ನು ವಿದ್ಯಾರ್ಥಿಗಳು ಆಯಾ ತರಗತಿಗೆ ಹಾಜರಾದ ಬಗ್ಗೆ ಉಪನ್ಯಾಸಕರ ವಿವೇಚನೆ ಮೇರೆಗೆ ಅಂಕ ನೀಡುವುದು. ಅಲ್ಲದೇ ಪ್ರಾಯೋಗಿಕ ವಿಷಯಕ್ಕೆ ಸಂಬಂಧಿಸಿದಂತೆ, ಆಯಾ ವಿಷಯದ ಉಪನ್ಯಾಸಕರುಗಳು, ವಿಷಯಕ್ಕೆ ಸಂಬಂಧಿಸಿದಂತೆ ಈ ಹಿಂದೆ ನಡೆಸಿದ ಪ್ರಾಯೋಗಿಕ ತರಗತಿಗಳ ಆಧಾರದ ಮೇಲೆ ನಿಷ್ಪಕ್ಷಪಾತವಾಗಿ ಅಂಕಗಳನ್ನುನೀಡುವುದು.

ಒಟ್ಟಾರೆ 21+10(ಪ್ರಾಯೋಗಿಕ ಅಂಕಗಳು)+22+22+5+20 (ಪ್ರಾಯೋಗಿಕ ಅಂಕಗಳು= ರೆಕಾರ್ಡ ಬರವಣಿಗೆಗೆ 10 ಅಂಕಗಳು ಹಾಗೂ ಉಪನ್ಯಾಸಕರು ಆಂತರಿಕ ಮೌಲ್ಯಮಾಪನವೆಂದು ನೀಡುವ 10 ಅಂಕಗಳು)=100 ಆಗುವುದು.

ಸೂಚನೆ; ವಿದ್ಯಾರ್ಥಿಗಳ ಅಂಕಗಳನ್ನು SATS PORTAL ನಲ್ಲಿ ಅಂಕಗಳನ್ನು ನಮೂದು ಮಾಡುವ ವಿಧಾನದ ಬಗ್ಗೆ ಪ್ರತ್ಯೇಕ ಸುತ್ತೋಲೆ ಹೊರಡಿಸಲಾಗುವುದು.

ರಾಜ್ಯದ ಎಲ್ಲಾ ಜಿಲ್ಲೆಗಳ ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪನಿರ್ದೇಶಕರು ಸೂಕ್ತ ಕ್ರಮ ತೆಗೆದುಕೊಳ್ಳಲು ಸೂಚಿಸಿದೆ ತೆಗೆದುಕೊಂಡ ಕ್ರಮದ ಬಗ್ಗೆ ಕೇಂದ್ರ ಕಛೇರಿಗೆ ವರದಿ ನೀಡುವುದು.

ನಿರ್ದೇಶಕರು,
ಪದವಿ ಪೂರ್ವ ಶಿಕ್ಷಣ ಇಲಾಖೆ.

ಪ್ರತಿ.

1. ರಾಜ್ಯದ ಎಲ್ಲಾ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲರ ಸೂಕ್ತ ಕ್ರಮಕ್ಕಾಗಿ.
2. ರಾಜ್ಯದ ಎಲ್ಲಾ ಜಿಲ್ಲೆಗಳ ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪನಿರ್ದೇಶಕರ ಅಗತ್ಯ ಕ್ರಮಕ್ಕಾಗಿ
3. ಸಹಾಯಕ ನಿರ್ದೇಶಕರು, ಇ-ಆಡಳಿತ ಪಪೂಶಿಇ (ಇಲಾಖಾ ಅಂತರ್ಜಾಲದಲ್ಲಿ ಪ್ರಕಟಿಸಲು).
4. ಕಛೇರಿ ಪ್ರತಿ.

Scanned by CamScanner